ನಂತರವೂ ಕೂಡ ಮಂಕಾಗಿ ಬಿಟ್ಟಿದ್ದಳು. ಅವಳಿಗೆ ಯಾವುದರ ಬಗ್ಗೆಯೂ ಆಸಕ್ತಿ ಇರಲಿಲ್ಲ. ಊಟ ಉಪಚಾರ ಉಡಿಗೆ ತೊಡಿಗೆ ಕಾಲೇಜಿನ ಓದು ಎಲ್ಲವೂ ಬದಿಗೆ ಸರಿದು ಹೋಯಿತು. ಬೆಳಗೂ ಸಂಜೆ ಮೊಬೈಲ್ ಅನ್ನು ಹಿಡಿದೇ ತಾಯಿಯ ಹತ್ತಿರ ಹತ್ತಾರು ಬಾರಿ ಬಯ್ಯಿಸಿಕೊಳ್ಳುತ್ತಿದ್ದ ಆಕೆ ಆ ಘಟನೆಯ ನಂತರ ಮೊಬೈಲ್ ಮುಟ್ಟಲಿಲ್ಲ ಮತ್ತು ಮನೆಯ ಹೊಸ್ತಿಲು ಕೂಡ ದಾಟಲಿಲ್ಲ. ಆ ಮೊಬೈಲ್ ಹಲವಾರು ಸಾರಿ ಬಡಕೊಂಡಿತು. ನಾಲ್ಕಾರು ಬೇರೆ ಬೇರೆ ನಂಬರ್‌ಗಳು ನಿರಂತರವಾಗಿ ಕುಂಯ್‌ಗೊಟ್ಟುತ್ತಿದರೂ ಅದರ ಹಿಂದೆ ಇರುವುದು ಒಂದೇ ಹೃದಯ ಎಂಬುದು ಸಾಲಿಹಾಗೆ ಗೊತ್ತಾಯಿತು. ಆದರೆ ಮೆಹೆಕ್ ಅದನ್ನು ಒಂದೇ ಏಟಿಗೆ ಎತ್ತಿ ಬಿಸಾಡಿದಳು. ಅದು ಮಂಚದ ಯಾವುದೋ ಮೂಲೆಯಲ್ಲಿ ಬಿದ್ದು ಕಣ್ಮರೆಯಾಯಿತು.

ಮೊದಮೊದಲು ಒಂದೆರಡು ದಿನ ಸಾಲಿಹಾ 'ಒಳ್ಳೆಯದೇ ಆಯಿತು' ಎಂದು ಅಂದುಕೊಂಡಳು. ಆದರೆ ಮೆಹೆಕ್ ಪ್ರಜ್ಞೆ ಇಲ್ಲದವಳಂತೆ ಸದಾ ಕಾಲ ದೂರದ ಗೋಡೆಯೊಂದನ್ನು ದಿಟ್ಟಿಸುತ್ತಾ ಕೂರುವುದು, ಮುಖ ಮುಚ್ಚಿಕೊಂಡು ಮಲಗುವುದು ಮುಂತಾದುವನ್ನು ಮಾಡಲಾರಂಭಿಸಿದಾಗ ಅವಳ ಎದೆ ಧಸಕ್ ಎಂದಿತು. ಮೂರು ದಿನಗಳ ಕಾಲ ಅವಳು ಒಂದಗಳು ಅನ್ನವನ್ನಾಗಲೀ ಒಂದು ಹನಿ ನೀರನ್ನಾಗಲೀ ಬಾಯಿಗೆ ಇಡಲಿಲ್ಲ. ಬದಲಿಗೆ ತಾಯಿಯನ್ನು ಶತ್ರುವಿನಂತೆ ಕಾಣತೊಡಗಿದಳು. ಸಾಲಿಹಾ ಅದನ್ನು ಯಾರೊಡನೆಯೂ ಹೇಳಿಕೊಳ್ಳಲಿಲ್ಲ. ಮನೆಯ ವಾತಾವರಣ ಎಂದಿನಂತಿಲ್ಲ ಎಂದು ಅನ್ವರ್‌ಗೆ ಅನಿಸಿದರೂ ಅವನು ತನ್ನ ವ್ಯವಹಾರದಲ್ಲಿ ಮುಳುಗಿದ. ಹೀಗಾಗಿ ಒಂದೆರಡು ದಿನಗಳ ಕಾಲ ಅವನು ಕೂಡ ಗಮನಿಸಲಿಲ್ಲ. ನಂತರದಲ್ಲಿ ಮೆಹೆಕ್‌ನ ಬಗ್ಗೆ ತುಣುಕು ತುಣುಕಾಗಿ ಸಾಲಿಹಾ ಹೇಳಿದಾಗ ಅವನು ಕೂಡ ಗಾಬರಿಯಾದ. ನಜ್ಮಾ ಕೂಡ ದಿಕ್ಕೆಟ್ಟವಳಂತಾದಳು. ಕೊನೆಗೆ ಅವರೆಲ್ಲರೂ ಕುಳಿತು ಆಕೆಯನ್ನು ಒಬ್ಬ ಮನೋವೈದ್ಯರ ಬಳಿ ಕರೆದುಕೊಂಡು ಹೋಗುವುದೇ ಸೂಕ್ತ ಎಂದು ತೀರ್ಮಾನಿಸಿದರು ಮತ್ತು ಆ ಊರಿನ ಮನೋವೈದ್ಯರು ಬೇಡ, ಬದಲಿಗೆ ಪಕ್ಕದ ಜಿಲ್ಲೆಯ ಒಬ್ಬ ಖ್ಯಾತವೈದ್ಯರನ್ನು ಸಂಪರ್ಕಿಸುವುದೆಂದು ಅವರು ತೀರ್ಮಾನಿಸಿದರು. ಇಡೀ ದಿನ ತನ್ನ ಹಣ್ಣಿನ ಮಂಡಿಯ ಮೇಲ್ವಿಚಾರಣೆಯನ್ನು ತನ್ನ ಅಣ್ಣನಿಗೆ ವಹಿಸಿದ ಅನ್ವರ್ ಬಾಡಿಗೆ ಕಾರಿನಲ್ಲಿ ತನ್ನಿಬ್ಬರು ಹೆಣ್ಣು ಮಕ್ಕಳು ಮತ್ತು ಪತ್ನಿಯೊಂದಿಗೆ ಪ್ರಯಾಣ ಬೆಳೆಸಿದ.

> ಅವಳು ಹಿಂದೆ ತಿರುಗಿ ನೋಡಿ, "ಬಶೀರ್... ಬಶೀರ್" ಎಂದು ಏರುಧ್ವನಿಯಲ್ಲಿ ವಿಕಾರವಾಗಿ ಕಿರುಚಿದಳು. "ಏನು ಚಿಕ್ಕಮ್ಮ?" ಎಂದು ಪ್ರಶ್ನಿಸುತ್ತಾ ಧಾವಿಸಿ ಬಂದ ಅವನತ್ತ ನೋಡಿ ಬಾಗಿಲತ್ತ ಕೈ ತೋರಿಸುತ್ತಾ ಅವಳು ಕನಲಿದಳು ಮತ್ತು ಹರಕು ಮುರುಕಾಗಿ, "ಬಾಗಿಲು ತೆಗೆಯುತ್ತಿಲ್ಲ" ಎಂದು ಹೇಳಿದವಳೇ ಪ್ರಜ್ಞೆ ತಪ್ಪಿದಳು.

ಹೀಗೆ ಶುರುವಾದ ಆ ಕುಟುಂಬದ ಪಯಣ ಮೂರು ವರ್ಷಗಳವರೆಗೆ ನಿರಂತರವಾಗಿ ನಡೆಯಿತು. ಮೆಹೆಕ್ ಆ ಸುಗಂಧಪೂರಿತ ಹೆಸರಿಗೆ ಅನುಗುಣವಾಗಿ ಕಳೆ ಕಳೆಯಾಗಿ ಕಣ್ಣು